409

ಇಸ್ತಿಹಾರಿ ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಷಹರ ಮಜಕೂರ ಕೋಟೇಲಿ ಇರುವ ಈ ಕೆಳಗೆ ತಪಸೀಲ ಮಾಡಿ ಯಿರುವ ಕಟ್ಟಡಗಳು 1890ನೇ ಇಸವಿ ಜುಲೈ 7ನೇ ತಾರೀಖು ಸೋಮವಾರ ದಿನ ಸಿಟಿ ಮ್ಯುನಿಸಿಪಲ್ ವೈಸ ಪ್ರೆಸಿಡೆಂಟರವರ ಸಮಕ್ಷವು ಆ ಸ್ಥಳದಲ್ಲಿ ಹರಾಜು ಮಾಡಲ್ಪಡುತ್ತೆ. ಹರಾಜ್ ಸದರೀ ತಾರೀಖು ದಿವಿ 12 ಘಂಟೆಗೆ ಷುರು ಮಾಡಿ ಹರಾಜಿನಲ್ಲಿ ಚಡ ದರಖಾಸ್ತು ಮಾಡಿದವರಿಗೆ ಬಿಡಲ್ಪಡುತ್ತೆ.

2. ಹರಾಜಿನಲ್ಲಿ ಪಡದವನು ಕೂಡ್ಲೆ ಚಡ ದರಖಾಸ್ತು ಮೊಬಲಗ ಪೈಕಿ ಶೇಕಡಾ 25ರ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಬಾಕಿ ಮೊಬಲಗು ಪಾವತಿ ಮಾಡಬೇಕು, ತಪ್ಪಿದಲ್ಲಿ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಡುವದು.

3. ಪಾಯಿದೆ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದೇಲೂ ಬಾಕಿ ಮೊಬಲಗು ಪಾವತಿ ಮಾಡದೇಲೂ ತಪ್ಪಿದರೆ ಈ ಕಟ್ಟಡಗಳು ಪುನಹ ಹರಾಜು ಮಾಡಲ್ಪಡುವವು. ಹೀಗೆ ಮಾಡುವದರಿಂದ ಪುಂಟಾಗುವ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನು ಗುರಿಯಾಗುವನು.

4. ಹರಾಜಿನಲ್ಲಿ ದರಖಾಸ್ತು ಮಾಡುವವರು ಅವರ ಸ್ವಂತಕ್ಕಾಗಿ ಸವಾಲು ಮಾಡುವ ಬಗ್ಯೂ ಅಥವಾ ಇತರರಿಗೋಸ್ಕರ ಸವಾಲ್ ಮಾಡುವ ಬಗ್ಯೂ ಸ್ಪಷ್ಟವಾಗಿ ಲಿಖಿತಮೂಲಕ ತಿಳಿಸಬೇಕು. ಹೀಗೆ ಮಾಡದೆ ಯಿದ್ದರೆ ಅಂಥಾವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಹೀಗೆ ಮಾಡುವ ಹರಾಜು ದಿವಾ ಸಾಹೆಬರವರಿಂದ ಕಾಯಂ ಆಗುವ ಪರಿಗೆ ಬೈಡ್ ಆಗತಕ್ಕದ್ದಲ್ಲ. ದಿವಾ ಸಾಹೆಬರವರು ಹರಾಜಿನಲ್ಲಿ ಮಾಡುವ ಸವಾಲ್ ಯಾವಾಗಲಾಗಲಿ ಯಾವ ಕಾರಣವನ್ನೂ ತಿಳಿಸದೇ ಅಂಗೀಕರಿಸುವದಕ್ಕೂ ತಿರಸ್ಕರಿಸುವದಕ್ಕೂ ಸ್ವತಂತ್ರ ವುಳ್ಳವರಾಗಿ ಯಿರುತ್ತಾರೆ.

6. ಹರಾಜಿನಲ್ಲಿ ಪಡದವರು ಪೂರಾ ಮೊಬಲಗು ಪಾವತಿ ಮಾಡಿ ದಿವಾ ಸಾಹೆಬರವರಿಂದ ಹರಾಜು ಕಾಯಂ ಆದನಂತರ ಸ್ವತ್ತುಗಳು ಅವರ ಸುಫರ್ದು ಮಾಡಲ್ಪಡುತ್ತೆ ಕಿವಾಯಿ ಹರಾಜು ಸರಟಿಫಿಕೇಟ್ ಸ್ಯೆ ಮೊಹರಿನಿಂದ ಕೊಡಲ್ಪಡುತ್ತೆ.

7. ಈ ಕಟ್ಟಡಗಳ ಪ್ಲಾನ್ ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ ಯಿರುತ್ತೆ. ಜನಗಳು ಬಂದು ನೋಡಬಹುದು.

ಕಟ್ಟಡಗಳ ತಪಸೀಲ್.

	ಚಕ್ಕುಬಂದಿ
ಬಾರ್‌ಕೋಸ್ ಕಟ್ಟಡಾ ಅಥವಾ ಗ್ಯಾರಿಸ್ಸ ಆಸ್ಪತ್ರೆ ಇದರಲ್ಲಿ ಪೂರ್ವ ಮತ್ತು ಪಶ್ಚಿಮಭಾಗದಲ್ಲಿ ಕಂಪಾಂಡು ಗೋಡೆಗೆ ಕೇರಿದ ಜಮೀನ್ ಯಿದರ ಮಧ್ಯೆ ಖಾಲಿ ಸಹ.	ಉತ್ತರಕ್ಕೆ.—ಸಂಣ ಬಂಗಲೆ. ದಕ್ಷಿಣಕ್ಕೆ—ಅಪ್ಪಾವು ಮೊದಲ್ಯಾರ ಬಂಗಲೆ. ಪೂರ್ವಕ್ಕೆ—ಉತ್ತರದಿಂದ ದಕ್ಷಿಣಕ್ಕೆ ಹೋಗುವ ಕೋಟೇ ರಸ್ತೆ. ಪಶ್ಚಿಮಕ್ಕೆ—ಕೋಟೇ ಗೋಡೆ ರಸ್ತೆ.
ಕೆಳಭಾಗದ ತೋಪು ಖಾನೆ ಅಥವಾ ದಂಡಿನ ಸಾರ್ವಾ ಯಿ ಷತಕ್ಕ ಗಡಂಗು ಯಿದರ ಮಧ್ಯೆ ಮೂರು ಪಾರ್ಶ್ವದಲ್ಲಿಯೂ ಖಾಲಿ ಯಿದರಲ್ಲಿ ಹಳೇ ಬಾದೂದುಖಾನೆ ಕೇರಿಕೊಂಡಿರುತ್ತೆ.	ಉತ್ತರಕ್ಕೆ.—ಅಪ್ಪಾವು ಮೊದಲ್ಯಾರ ಬಂಗಲೆ ಯಿಂದ ಗುಡಿಗೆ ಹೋಗುವ ಸಂಣ ರಸ್ತೆ. ದಕ್ಷಿಣಕ್ಕೆ—ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ದೊಡ್ಡ ಹೊಸ ರಸ್ತೆ. ಪೂರ್ವಕ್ಕೆ—ಉತ್ತರದಿಂದ ದಕ್ಷಿಣಕ್ಕೆ ಹೋಗುವ ದೊಡ್ಡ ರಸ್ತೆ. ಪಶ್ಚಿಮಕ್ಕೆ—ಕೋಟೆಯಗೋಡೆ ಬಾಜೂ ರಸ್ತೆ.

ತಾರೀಖು 6ನೇ ಜೂನ್ 1890.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ,—ಮಾಗಡಿ ತಾಲ್ಲೂಕು ಸಾವಂದುರ್ಗದ ಜಂಗಲ್‌ನಲ್ಲಿ ಬಹಳ ಬಿದುರುಗಳು ಅಂದರೆ ದೊಡ್ಡದು ಸಂಣದು ಸಪ ಕಡಿಯಲು ಲಾಯಖಾಗಿ ಯಿರುತ್ತವ. ಯಿವುಗಳನ್ನ 10—7—90ನೇತಾರೀಖು ದಿವಿ 11 ಘಂಟೆಗೆ ಮಾಗಡೀಲಿ ತಾಲ್ಲೂಕು ಅಮಲ್ದಾರ್ರವರ ರೂಬರೂವ್ ಹರಾಜ್ ಮಾಪುತ್ತೆ.

ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

2. ಖಾಯಿಷ್ ವುಳ್ಳವರು ಫಾರೆಸ್ಟ್ ಇಲಾಖೆಯವರಿಂದ ಗೊತ್ತುಮಾಡಿಕೊಳುವ ಬ್ಲಾಕಿನಲ್ಲಿ ಪೊಂಬುಗಳನ್ನ ಕಡಿದು ಸಾಗಿಸಿ ಕೊಳ್ಳತಕ್ಕದ್ದಾಗಿರುತ್ತೆ.

3. ಆಕ್ಷೈರ್ ಸವಾಲ್ ಕೈದುಮಾಡಿದ ಕೂಡ್ಲೆ ಚಡ ಸವಾಲ್‌ದಾರನು ಹರಾಜು ಮೊಬಲಗಿನಲ್ಲಿ ಶೇಕಡಾ 25 ರೂಪಾಯಿ ಮೇರೆ [illegible] ಯಿಡಬೇಕು. ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು ಮಂಜೂರ್ಮಾಡಿದನಂತರ ಬಾಕಿ ಮೂರುಭಾಗದ ಮೊಬಲಗ್ ಕೊ

ಟ್ಟು ಬಿಡಬೇಕು. ನಂತರ ಗೊತ್ತು ಮಾಡಿ ಕೊಡುವ ಬ್ಲಾಕಿನಲ್ಲಿ ಬಿದರುಗಳನ್ನು ಕಡಿಯಲು ಅಪ್ಪಣೆ ಕೊಡಲಾಧೀತು, ಕಡಿಯುವಾಗ ಜಂಗಲ್‌ನಲ್ಲಿ ಇತರ ಮರ ಯಾ ಪೊರಗಳನ್ನು ಕಡಿಯಕೂಡದು, ಯಾ ಜಾಯಾ ಮಾಡಕೂಡದು, ಅಥವಾ ಮತ್ಯಾವ ಡಾಮೇಜನ್ನು ಮಾಡಕೂಡದು. ಇದಕ್ಕೆ ವಿರೋಧವಾಗಿ ನಡದರೆ ಫಾರೆಸ್ಟ್ ರೂಲ್ಸ್ ಮೇರೆ ಅವರು ಮಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಬಳಪಡುವರು.

4. ಆವಶ್ಯಕವಾದಷ್ಟು ಬಿದರು ಕಡಿಯೋಣ ಪೂರೈಸಿದ ಕೂಡ್ಲೆ ಫಾರೆಸ್ಟ್ ಆಫೀಸರಯವರು ಯೇಣಿಕೆ ಮಾಡಿದ ನಂತರ ಹರಾಜುದಾರನು ಯುಕ್ತಾನುಸಾರ ಕೊಡುವ ವಾಯಿದೆಯಲ್ಲಿ ಭಂಡಿಗಳಲ್ಲಿ ಸಾಗಿಸಿಕೊಳ್ಳಲು ಸದ್ಧತಿ ಮೇರೆ ಲೈಸೆನ್ಸ್ ಕೊಡಲಾಧೀತು

5. ಬ್ರಾಕ್ ಅಂದರೆ ಹರಾಜುವೊಬಲಗು ಪೈಕಿ ಮೂರು ಭಾಗದ ಹಣ ಕೊಡಲು ತಪ್ಪಿದರೆ ಡಿಪಾಜಿಟ್ ಬಗೆ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲಾಧೀತು, ಅಲ್ಲದೆ ಹರಾಜುದಾರರಿಗೆ ಕೊಟ್ಟುರಬಹುದಾದ ಬ್ಲಾಕನ್ನು ಪುನಹ ಹರಾಜು ಮಾಡಿಸುತ್ತೆ. ಇದಕ್ಕಾಗಿ ತಗಲುವ ಖರ್ಚು ಮತ್ತು ಲುಕ್‌ಸಾನಿಗೂ ಮೊದಲಿನ ಹರಾಜುದಾರನೇ ಗುರಿಯಾಗಿ ಯಿರತಕ್ಕದ್ದು.

ಪಿ. ಯರ್. ಕೃಷ್ಣಮೂರ್ತಿ,
ಡಿಪ್ಯೂಟಿ ಕಮ್ಮಿಷನರ್.

ಪ್ಯಾರ್ಟಿಷನ್ ಆಫೀಸ್.

23ನೇ ಮಾಹೆ ಮೇ 1890ನೇ ಇಸವಿ.

ಇಸ್ತಿಹಾರ್‌ನಾಮೆ.

ಹೊನ್ನವಳ್ಳಿ ಪ್ಯಾರ್ಟಿಷನ್ ವಾಜರಾಗಿ ಯಿದ್ದು ಹಾಲಿ ಮೃತಪಟ್ಟು ಯಿರುವ ಶೇಷ ಯಂಬುವನಿಗೆ ಸದರೀಯವನು ಸದರೀ ಪ್ಯಾರ್ಟಿಷನಿನಲ್ಲಿ ಕಾಮಗಾರಿ ಮಾಡಿಸಿದ್ದಕ್ಕಾಗಿ (83—5—6) ರೂಪಾಯಿಗಳು ಸಲ್ಲಬೇಕಾಗಿ ಯಿದೆ. ಈ ಮೊಬಲಗ್ಯೆ ಬಾಧ್ಯತೆವುಳ್ಳ ಜನಗಳು ಈ ತಾರೀಖು ಲಾಗಾಯತು ಆರು ತಿಂಗಳ ವಳಗಾಗಿ ಹಕ್ಕುದಾರಿ ಸರಟಿಫಿಕೇಟ್ ನೊಡನೆ ನನ್ನ ಆಫಿಸಿಗೆ ಅರ್ಜೀಬರದು ಕೊಳ್ಳಬೇಕು, ಈ ವಾಯಿದೆ ಪೂರೈದನಂತರ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ನಂತರ ಯಾರ ಹಕ್ಕುದಾರಿಯನ್ನೂ ವಿಚಾರಿಸುವದಿಲ್ಲ.

ಯಸ್. ಬಾವೂರಾವ್,
ಸಬ್ ಅಸಿಸ್ಟೆಂಟ್ ಕಂಸರ್‌ವೇಟರ್ ಪ್ಯಾರ್ಟಿಷನ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜಿ ನಂಬರ್ 137.

ಮೃತಪಟ್ಟು ನಿಂಗಶೆಟ್ಟರ ಆಸ್ತಿವಿಷಯದಲ್ಲಿ—

ಅರ್ಜಿದಾರು: ಬೋರಮ್ಮ, ಬೋರಶೆಟ್ಟಿ, ಮೃತಪಟ್ಟ ಸದರೀ ನಿಂಗಶೆಟ್ಟರಿಗೆ ಹೆಂಡತಿ ದತ್ತು ಮಗ ಅಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಬೋರಮ್ಮ ಬೋರಶೆಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ನಿಂಗಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 990—15—6 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1—2ನೇ ಅರ್ಜೀದಾರ್ರ ಅರ್ಜಿಯನ್ನು 1890ನೇ ಇಸವಿ ಜೂ೯ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನಿಂಗಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಜೂ೯ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 15ನೇ ಜೂ೯ 1890.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಹಿಡುವಳಿಯಲ್ಲಿ ಇಲ್ಲದ ಕೆಡಾಯು ಗೊತ್ತಿಲ್ಲದಂಥಾ ಮತ್ತು ಗೊತ್ತು ಮಾಡಲ್ಪಟ್ಟು, ಜಮೀನ್‌ಗಳು ಅಡಗಿರುವ ಮತ್ತು ಹಳೆ ಮತ್ತು ಹೊಸ ಲೈಕ್‌ಗಳ ಮಧ್ಯೆ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಗ್ರಾಮ ಪೀಲಿಗಳ ಅಮರಾಯಿ ಅಮಾಯಿ ಪೀಲಿಗಳ (ಅಮೃತ ಮಹಲ್ ಕಾವಲ್‌ಗಳು, ಪ್ಲಾಂಟೇಷನ್‌ಗಳು ಸಂದಲ್ ಮತ್ತು ಫಾರೆಸ್ಟ್ ರಿಸರ್ವಾಡ್ ಷ್ಟ್ ಬ್ಲಾಕ್ ವಿನಹ) ಪಸಾರೆ ಹುಟ್ಟುವಳಿಗಳನ್ನು 1890ನೇ ಇಸವಿ ಮೇ ಮಾಹೆ ಗುರ್ತೇ ತಾರೀಖು ಲಾಗಾಯಿತು 1891ನೇ ಇಸವಿ ಏಪ್ರೆಲ್ 30ನೇ ತಾರೀಖಿನವರಿಗೆ ಜಪ್ತುಯಿಸುವ ಹಕ್ಕುದಾರಿಯು ಯಾವ ರೀತಿ ಹರಾಜ್ ಮಾಡಿದಲ್ಲಿ ಸರ್ಕಾರಕ್ಕೆ ಆದಾಯ ಬರಬಹುದೆಂದು ಅವರಿಗೆ ಸೂತ್ತ ತೋರುತ್ತೋ ಆ ಮೇರೆ ಆ ತಾಲ್ಲೂಕು ಅಮಲ್ದಾರ್ರ ರೂಬರೂ ಹೋಬಳಿವಾರ್ ಯಾ ತಾಲ್ಲೂಕು ವಟ್ಟಾಗಿಯಾಗಲಿ 1890ನೇ ಜುಲೈ 2ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ವಿುಲಕ ವಿಕ್ರಯಿಸಲ್ಪಡುತ್ತೆ.

ಹರಾಜ್ ಷರತ್ ವಗೈರೆ ಬಗ್ಯೆ ಸ೯ 1890ನೇ ಇಸವಿ ಮೇ ತಿಂಗಳು 10ನೇ ತಾರೀಖು ಮೈಸೂರು ಗೆಜೆಟ್ಟಿನ ನೇ ಪುಟದಲ್ಲಿ ಛಾಪಿಸಲ್ಪಟ್ಟಿರುವ 1890ನೇ ಇಸವಿ ಏಪ್ರೆಲ್ 22ನೇ ಮರ್ಕುಂ ನೋಟಿಸ್ ಓದಿಕೊಳ್ಳಬೇಕು.

ಜಿ. ಯಫ್. ಮೈಕಲ್‌ಜಾರ್ಜ್,
ಡಿಪ್ಯೂಟಿ ಕಮ್ಮಿಷನರ್.